ಹೊಸ ದಿಗಂತ
Sangama 5
16 Nov 2024

## ಮಂಗಳೂರು ವಿವಿಯಲ್ಲಿ ಕನಕತತ್ವ ಚಿಂತನ ಪ್ರಚಾರೋಪನ್ಯಾಸ ಕಾರ್ಯಕ್ರಮ

# ಯಂತ್ರಗಳ ದಾಸರಾಗಬೇಡಿ: ಪ್ರೊ.ಮಲ್ಲೇಪುರಂ

**ಕೊಣಾಜೆ:** ಭಾರತೀಯರು ವಿದ್ಯೆ, ಕಲೆ ಮತ್ತು ಅಧ್ಯಾತ್ಮ ಈ ಮೂರರ ಆರಾಧಕರು. ಆದ್ದರಿಂದ ಲೌಕಿಕ ಮೋಹವನ್ನು ಮೀರುವ ಮೌಲ್ಯ ಭಾರತೀಯ ಚಿಂತನ ಪರಂಪರೆಯಲ್ಲಿ ಸಹಜವಾಗಿದೆ ಎಂದು ಸಂಸ್ಕೃತ ವಿ.ವಿ. ವಿಶ್ರಾಂತ ಕುಲಪತಿ, ವಿದ್ವಾಂಸರಾದ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದ್ದಾರೆ.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಕನಕದಾಸ ಸಂಶೋಧನಾ ಕೇಂದ್ರದ ಕನಕ ತತ್ತ್ವ ಪ್ರಚಾರೋಪನ್ಯಾಸ ಮಾಲಿಕೆಯಡಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ 'ಅವಧೂತ ಪರಂಪರೆ ಮತ್ತು ಕನಕದಾಸರು' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಭಾರತದಲ್ಲಿ ಋಷಿ ಪರಂಪರೆ ಮತ್ತು ಮುನಿ ಪರಂಪರೆಯ ಧಾರೆಗಳಿದ್ದು ಋಷಿಪರಂಪರೆ ಗೃಹಸ್ಥರಾಗಿದ್ದುಕೊಂಡೇ ಪ್ರಕೃತಿಗೆ ಅನುಗುಣವಾಗಿ ಬದುಕುತ್ತಾ ಅದನ್ನು ಸಾರುತ್ತಾ ಬಂದಿತು. ಮುನಿ ಪರಂಪರೆ ಅಂತರಂಗದ ಸಾಧನೆಗೆ ವಿಶೇಷ ಒತ್ತು ನೀಡಿ ಈ ಜಗತ್ತು, ಸಂಸಾರ ನನಗೆ ಸೇರಿದ್ದಲ್ಲ ಎಂಬ ಭಾವದಿಂದ ಬೆಳೆಯಿತು. ಈ ಪರಂಪರೆಯಲ್ಲಿ ಬರುವ ಅವಧೂತರು ಅನೇಕದಲ್ಲಿ ನಂಬಿಕೆಯಿಟ್ಟವರು. ಅವರಿಗೆ ಮೇಲು ಕೀಳು ಭಾವನೆಯಿಲ್ಲ, ದೇಹ ಮೋಹವನ್ನು ತೊಳೆದುಕೊಂಡವರು ಅವಧೂತರು ಎಂದು ಹೇಳಿದರು.

ತತ್ತ್ವ ಬೋಧಿಸುವವರು ಬೇಕಾದಷ್ಟು ಮಂದಿ ಇದ್ದಾರೆ. ಆದರೆ ಪ್ರಾಯೋಗಿಕವಾಗಿ ತತ್ತ್ವವನ್ನು ಬದುಕುವವರು ಕಡಿಮೆಯಾಗಿದ್ದಾರೆ. ಪ್ರತಿಯೊಬ್ಬನೂ ತಾನು ಮೌಲ್ಯವನ್ನು ಅಳವಡಿಸಿಕೊಂಡರೆ ಸಮಾಜದಲ್ಲಿ ಮಹತ್ತರ ಬದಲಾವಣೆ ಸಾಧ್ಯ. ನಾವು ಯಂತ್ರಗಳ ದಾಸರಾಗಬಾರದು. ಯಂತ್ರಗಳು ನಮ್ಮ ದಾಸರಾಗಿರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ.ಸೋಮಣ್ಣ ಹೊಂಗಳ್ಳಿ ಮಾತನಾಡಿದರು. ಪ್ರೊ.ನಾಗಪ್ಪ ಗೌಡ, ಡಾ.ಯಶುಕುಮಾರ್ ಉಪಸ್ಥಿತರಿದ್ದರು. ಕನಕದಾಸ ಸಂಶೋಧನ ಕೇಂದ್ರದ ಸಂಯೋಜಕ ಡ.ಧನಂಜಯ ಕುಂಬ್ಳೆ ಪ್ರಸ್ತಾವನೆಗೈದರು. ದೇವಮ್ಮ ವಂದಿಸಿದರು. ಸಂಧ್ಯಾ ಎನ್. ನಿರೂಪಿಸಿದರು.



### ಅವಧೂತ ಪರಂಪರೆಗೆ ಸೇರಿದವರು

ಕನಕದಾಸರು ಅವಧೂತ ಪರಂಪರೆಗೆ ಸೇರಿದವರು. ಶಿಶುನಾಳ ಶರೀಫರ ತತ್ತ್ವಪದಗಳಲ್ಲಿ ಅವಧೂತ ಪರಂಪರೆಯ ವಿಚಾರಗಳಿವೆ. ಋಷಿ, ಮುನಿ, ಯೋಗಿ, ಸನ್ಯಾಸಿ, ಸಂತ, ಅವಧೂತ ಮೊದಲಾದ ಪರಿಕಲ್ಪನೆಗಳ ಮೂಲತತ್ತ್ವ ಮನುಷ್ಯನೊಳಗಿನ ಅಸುರ ಗುಣವನ್ನು ದೂರ ಮಾಡಿ ದೇವಗುಣವನ್ನು ಉದ್ದೀಪನಗೊಳಿಸುವುದೇ ಆಗಿದೆ.

• ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್

# ಜೀವನದಲ್ಲಿ ಮೌಲ್ಯಗಳು ಅಗತ್ಯ: ಪ್ರೊ.ಮಲ್ಲೇಪುರಂ

## ಮಂಗಳೂರು ವಿವಿ ಕನಕತತ್ವ ಚಿಂತನ ಪ್ರಚಾರೋಪನ್ಯಾಸ



ಕೊಣಾಜೆ, ನ.15: ತತ್ವ ಬೋಧಿಸುವವರು ಬೇಕಾದಷ್ಟು ಮಂದಿ ಇದ್ದಾರೆ. ಆದರೆ ಪ್ರಾಯೋಗಿಕವಾಗಿ ತತ್ವವನ್ನು ಅಳವಡಿಸಿ ಬದುಕುವವರು ಕಡಿಮೆಯಾಗಿದ್ದಾರೆ. ಪ್ರತಿಯೊಬ್ಬನೂ ಮೌಲ್ಯವನ್ನು ಅಳವಡಿಸಿಕೊಂಡರೆ ಸಮಾಜದಲ್ಲಿ ಮಹತ್ತರ ಬದಲಾವಣೆ ಸಾಧ್ಯ. ನಾವು ಯಂತ್ರಗಳ ದಾಸರಾಗಬಾರದು. ಯಂತ್ರಗಳು ನಮ್ಮ ದಾಸರಾಗಿರಬೇಕು ಎಂದು ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ, ವಿದ್ವಾಂಸ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದ್ದಾರೆ.

ಅವರು ಮಂಗಳೂರು ವಿವಿ ಕನಕದಾಸ ಸಂಶೋಧನಾ ಕೇಂದ್ರದ ಕನಕತತ್ವ ಪ್ರಚಾರೋಪನ್ಯಾಸ ಮಾಲಿಕೆಯಡಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ 'ಅವಧೂತ ಪರಂಪರೆ ಮತ್ತು ಕನಕದಾಸರು' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಭಾರತದಲ್ಲಿ ಋಷಿ ಪರಂಪರೆ ಮತ್ತು ಮುನಿ ಪರಂಪರೆಯ ಧಾರೆಗಳಿದ್ದು ಋಷಿ ಪರಂಪರೆ ಗೃಹಸ್ಥರಾಗಿದ್ದುಕೊಂಡೇ ಪ್ರಕೃತಿಗೆ ಅನುಗುಣವಾಗಿ ಬದುಕುತ್ತಾ ಅದನ್ನು ಸಾರುತ್ತಾ ಬಂದಿತು. ಮುನಿ ಪರಂಪರೆ ಅಂತರಂಗದ ಸಾಧನೆಗೆ ವಿಶೇಷ ಒತ್ತು ನೀಡಿ ಈ ಜಗತ್ತು, ಸಂಸಾರ ನನಗೆ ಸೇರಿದ್ದಲ್ಲ ಎಂಬ ಭಾವದಿಂದ ಬೆಳೆಯಿತು. ಈ ಪರಂಪರೆಯಲ್ಲಿ ಬರುವ ಅವಧೂತರಲ್ಲಿ ಅನೇಕರು ಇದರಲ್ಲಿ ನಂಬಿಕೆಯಿಟ್ಟವರು. ಅವರಿಗೆ ಮೇಲು ಕೀಳು ಭಾವನೆಯಿಲ್ಲ. ದೇಹ ಮೋಹವನ್ನು ತೊಳೆದುಕೊಂಡವರು ಅವಧೂತರು ಎಂದು ಹೇಳಿದರು.

ಋಷಿ, ಮುನಿ, ಯೋಗಿ, ಸನ್ಯಾಸಿ, ಸಂತ, ಅವಧೂತ ಮೊದಲಾದ ಪರಿಕಲ್ಪನೆಗಳ ಸೂಕ್ಷ್ಮತೆಯನ್ನು ವಿವರಿಸಿದ ಅವರು ಎಲ್ಲ ಪರಿಕಲ್ಪನೆಗಳ ಮೂಲತತ್ವ ಮನುಷ್ಯನೊಳಗಿನ ಅಸುರ ಗುಣವನ್ನು ದೂರ ಮಾಡಿ ದೇವಗುಣವನ್ನು ಉದ್ದೀಪನಗೊಳಿಸುವುದೇ ಆಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ.ಸೋಮಣ್ಣ ಹೊಂಗಳ್ಳಿ ಮಾತನಾಡಿ, ಪ್ರಾಚೀನ ಪರಂಪರೆಯ ಅರಿವು ವರ್ತಮಾನದ ಚಿಂತನೆಗಳನ್ನು ಗಟ್ಟಿಗೊಳಿಸುವುದು ಅಗತ್ಯ ಎಂದರು. ಕಾರ್ಯಕ್ರಮದಲ್ಲಿ ಪ್ರೊ.ನಾಗಪ್ಪ ಗೌಡ, ಡಾ.ಯಶುಕುಮಾರ್, ಕನ್ನಡ ಮತ್ತು ಚರಿತ್ರೆ ವಿಭಾಗದ ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಉಪಸ್ಥಿತರಿದ್ದರು.

ಕನಕದಾಸ ಸಂಶೋಧನಾ ಕೇಂದ್ರದ ಸಂಯೋಜಕ ಡಾ.ಧನಂಜಯ ಕುಂಬ್ಳೆ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಸಂಧ್ಯಾ ಎನ್. ಕಾರ್ಯಕ್ರಮ ನಿರೂಪಿಸಿದರು. ವಿದ್ಯಾರ್ಥಿನಿ ದೇವಮ್ಮ ವಂದಿಸಿದರು.

Mangalore Edition

Nov 16, 2024 Page No. 4

▶ ಮಂಗಳೂರು ವಿ.ವಿ.ಯಲ್ಲಿ ಕನಕ ತತ್ತ್ವ ಚಿಂತನ

# ಅವಧೂತರಿಗೆ ಮೇಲು ಕೀಳು ಭಾವವಿಲ್ಲ: ಪ್ರೊ| ವೆಂಕಟೇಶ್



**ಉಳ್ಳಾಲ, ನ. 15:** ಭಾರತದಲ್ಲಿ ಋಷಿ ಪರಂಪರೆ ಮತ್ತು ಮುನಿ ಪರಂಪರೆಯ ಧಾರೆಗಳಿದ್ದು ಋಷಿ ಪರಂಪರೆ ಗೃಹಸ್ಥರಾಗಿದ್ದುಕೊಂಡೇ ಪ್ರಕೃತಿಗೆ ಅನುಗುಣವಾಗಿ ಬದುಕುತ್ತಾ ಅದನ್ನು ಸಾರುತ್ತಾ ಬಂದಿತು. ಮುನಿ ಪರಂಪರೆ ಅಂತರಂಗದ ಸಾಧನೆಗೆ ವಿಶೇಷ ಒತ್ತು ನೀಡಿ ಈ ಜಗತ್ತು, ಸಂಸಾರ ನನಗೆ ಸೇರಿದ್ದಲ್ಲ ಎಂಬ ಭಾವದಿಂದ ಬೆಳೆಯಿತು. ಈ ಪರಂಪರೆಯಲ್ಲಿ ಬರುವ ಅವಧೂತರು ಅನೇಕದಲ್ಲಿ ನಂಬಿಕೆಯಿಟ್ಟವರು. ಅವರಿಗೆ ಮೇಲು ಕೀಳು ಭಾವನೆಯಿಲ್ಲ, ದೇಹ ಮೋಹವನ್ನು ತೊಳೆದುಕೊಂಡವರು ಅವಧೂತರು ಎಂದು ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ, ವಿದ್ವಾಂಸರಾದ ಪ್ರೊ| ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಕನಕದಾಸ ಸಂಶೋಧನ ಕೇಂದ್ರದ ಕನಕ ತತ್ತ್ವ ಪ್ರಚಾರೋಪನ್ಯಾಸ ಮಾಲಿಕೆಯಡಿ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅವಧೂತ ಪರಂಪರೆ ಮತ್ತು ಕನಕದಾಸರು ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಋಷಿ, ಮುನಿ, ಯೋಗಿ, ಸನ್ಯಾಸಿ, ಸಂತ, ಅವಧೂತ ಮೊದಲಾದ ಪರಿಕಲ್ಪನೆಗಳ ಸೂಕ್ಷ್ಮವನ್ನು ವಿವರಿಸಿದ ಅವರು ಎಲ್ಲ ಪರಿಕಲ್ಪನೆಗಳ ಮೂಲತತ್ತ್ವ ಮನುಷ್ಯನೊಳಗಿನ ಅಸುರೀ ಗುಣವನ್ನು ದೂರ ಮಾಡಿ ದೇವಗುಣವನ್ನು ಉದ್ದೀಪನಗೊಳಿಸುವುದೇ ಆಗಿದೆ. ಭಾರತೀಯರು ವಿದ್ಯೆ, ಕಲೆ ಮತ್ತು ಅಧ್ಯಾತ್ಮ ಈ ಮೂರರ ಆರಾಧಕರು. ಆದ್ದರಿಂದ ಲೌಕಿಕ ಮೋಹವನ್ನು ಮೀರುವ ಮೌಲ್ಯ ಭಾರತೀಯ ಚಿಂತನ ಪರಂಪರೆಯಲ್ಲಿ ಸಹಜವಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ| ಸೋಮಣ್ಣ ಹೊಂಗಳ್ಳಿ ಮಾತನಾಡಿ, ಪ್ರಾಚೀನ ಪರಂಪರೆಯ ಅರಿವು ವರ್ತಮಾನದ ಚಿಂತನೆಗಳನ್ನು ಗಟ್ಟಿಗೊಳಿಸಲು ಅಗತ್ಯ ಎಂದರು. ಪ್ರೊ| ನಾಗಪ್ಪ ಗೌಡ, ಡಾ| ಯಶುಕುಮಾರ್ ಉಪಸ್ಥಿತರಿದ್ದರು.

ಕನಕದಾಸ ಸಂಶೋಧನ ಕೇಂದ್ರದ ಸಂಯೋಜಕ ಡಾ| ಧನಂಜಯ ಕುಂಬ್ಳೆ ಪ್ರಸ್ತಾವಿಸಿ ಸ್ವಾಗತಿಸಿದರು. ವಿದ್ಯಾರ್ಥಿನಿ ದೇವಮ್ಮ ವಂದಿಸಿದರು. ಸಂಧ್ಯಾ ಎನ್. ನಿರೂಪಿಸಿದರು. ಕನ್ನಡ ಮತ್ತು ಚರಿತ್ರೆ ವಿಭಾಗದ ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಭಾಗವಹಿಸಿದ್ದರು.

# ‘Avadhootas have no sense of superiority or inferiority’

**The Hindu Bureau**
MANGALURU

Avadhootas, who belong to a particular tradition, have no sense of superiority or inferiority, said scholar and former Vice-Chancellor of Karnataka Sanskrit University Mallepuram G. Venkatesh at Mangalore University on Friday.

He was speaking at the ‘Kanaka tatva prachara upanayas mala’ (a series of lectures on essence in the compositions of Kanakadasa) programme organised by the Centre for Research on Kanakadasa at the university.

Prof. Venkatesh said that Kanakadasa belonged to the Avadhoota tradition, and the teachings of Shishunala Sharifa also reflect Avadhoota principles



Former Vice-Chancellor of Karnataka Sanskrit University Mallepuram G. Venkatesh speaking at the ‘Kanaka tatva prachara upanayas mala’ programme at Mangalore University on Friday. SPECIAL ARRANGEMENT

He said that India has two main traditions - Rishi Parampare and Muni Parampare. Rishi Parampare focuses on living in harmony with nature, while Muni Parampare emphasises on inner spiritual growth and renunciation. All spiritual concepts, including Rishi, Muni, Yogi, Sanyasi, Sant, and Avadhoota, aim at overcoming the demonic tendencies within humans and awaken divine qualities.

**Prof. Venkatesh cautioned against becoming slaves to technology, instead advocating for technology to serve humanity**

Indians inherently value knowledge, art, and spirituality. Indian thoughts naturally transcends worldly attachments, he said. “There are many who preach philosophy, but a few who practice it. If each individual adopts these values, significant social change is possible,” he said.

Prof. Venkatesh cautioned against becoming slaves to technology, instead advocating for technology to serve humanity.

Presiding over the event, Somanna Hongalli, Chairman of the SVP Institute of Kannada Studies at the university, emphasised on the importance of understanding ancient traditions to strengthen contemporary thought. Co-ordinator of the centre Dhananjaya Kumble was present.

ಮಂಗಳೂರು ವಿವಿ: ಉಪನ್ಯಾಸದಲ್ಲಿ ಮಲ್ಲೇಪುರಂ ಜಿ.ವೆಂಕಟೇಶ್ ಅಭಿಮತ

# ‘ದೇಹ ಮೋಹವನ್ನು ತೊಳೆದುಕೊಂಡ ಅವಧೂತರು’

ಪ್ರಜಾವಾಣಿ ವಾರ್ತೆ

ಮುಡಿಪು: ‘ಅವಧೂತರು ಅನೇಕದಲ್ಲಿ ನಂಬಿಕೆಯಿಟ್ಟವರು. ಅವರಿಗೆ ಮೇಲು ಕೀಳು ಭಾವವಿಲ್ಲ. ದೇಹ ಮೋಹವನ್ನು ತೊಳೆದುಕೊಂಡವರು ಅವಧೂತರು’ ಎಂದು ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯದ ಕನಕದಾಸ ಸಂಶೋಧನಾ ಕೇಂದ್ರದ ಕನಕ ತತ್ವ ಪ್ರಚಾರೋಪನ್ಯಾಸ ಮಾಲಿಕೆಯಡಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ‘ಅವಧೂತ ಪರಂಪರೆ ಮತ್ತು ಕನಕದಾಸರು’ ಕುರಿತು ಅವರು ಉಪನ್ಯಾಸ ನೀಡಿದರು.

ಋಷಿ, ಮುನಿ, ಯೋಗಿ, ಸನ್ಯಾಸಿ, ಸಂತ, ಅವಧೂತ ಮೊದಲಾದ ಪರಿಕಲ್ಪನೆಗಳ ಸೂಕ್ಷ್ಮತೆಯನ್ನು ವಿವರಿಸಿದ ಅವರು, ‘ಎಲ್ಲ ಪರಿಕಲ್ಪನೆಗಳ ಮೂಲತತ್ವ ಮನುಷ್ಯನೊಳಗಿನ ಅಸುರ ಗುಣವನ್ನು ದೂರ ಮಾಡಿ, ದೇವಗುಣವನ್ನು ಉದ್ದೀಪನಗೊಳಿಸುವುದೇ ಆಗಿದೆ. ಭಾರತೀಯರು ವಿದ್ಯೆ, ಕಲೆ ಮತ್ತು ಅಧ್ಯಾತ್ಮ ಈ ಮೂರರ ಆರಾಧಕರು. ಆದ್ದರಿಂದ ಲೌಕಿಕ ಮೋಹವನ್ನು ಮೀರುವ ಮೌಲ್ಯ ಭಾರತೀಯ ಚಿಂತನ ಪರಂಪರೆಯಲ್ಲಿ ಸಹಜವಾಗಿದೆ’ ಎಂದು ವಿವರಿಸಿದರು.

ಕನಕದಾಸರು ಅವಧೂತ ಪರಂಪರೆಗೆ ಸೇರಿದವರು. ಶಿಶುನಾಳ ಶರೀಫರ ತತ್ವಪದಗಳಲ್ಲಿ ಅವಧೂತ ಪರಂಪರೆಯ ವಿಚಾರಗಳಿವೆ ಎಂದರು.

ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಸೋಮಣ್ಣ ಹೊಂಗಳ್ಳಿ ಅಧ್ಯಕ್ಷತೆ ವಹಿಸಿದ್ದರು. ‘ವರ್ತಮಾನದ ಪ್ರಾಚೀನ ಪರಂಪರೆಯ ಅರಿವು ಚಿಂತನೆಗಳನ್ನು ಗಟ್ಟಿಗೊಳಿಸಲು ಅಗತ್ಯ’ ಎಂದರು. ಪ್ರೊ.ನಾಗಪ್ಪ ಗೌಡ, ಯಶುಕುಮಾರ್ ಭಾಗವಹಿಸಿದ್ದರು.

ಕನಕದಾಸ ಸಂಶೋಧನಾ ಕೇಂದ್ರದ ಸಂಯೋಜಕ ಧನಂಜಯ ಕುಂಬ್ಳೆ ಪ್ರಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿನಿ ದೇವಮ್ಮ ವಂದಿಸಿದರು. ಸಂಧ್ಯಾ ಎನ್. ನಿರೂಪಿಸಿದರು. ಕನ್ನಡ ಮತ್ತು ಇತಿಹಾಸ ವಿಭಾಗದ ವಿದ್ಯಾರ್ಥಿಗಳು, ಸಂಶೋಧಕರು ಭಾಗವಹಿಸಿದ್ದರು.



ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ, ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ ವೆಂಕಟೇಶ್ ಅವರು ಕಾರ್ಯಕ್ರಮ ಉದ್ಘಾಟಿಸಿದರು

**ಮುಖ್ಯಾಂಶಗಳು**

- ಕನಕದಾಸ ಸಂಶೋಧನಾ ಕೇಂದ್ರದ ಕನಕ ತತ್ವ ಮಾಲಿಕೆ
- ಶರೀಫರ ತತ್ವಪದಗಳಲ್ಲಿ ಅವಧೂತ ಪರಂಪರೆ ವಿಚಾರ